**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 379/2023**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಮೊಹಮದ್ ಜಫ್ರಿ |
| ತಂದೆಯ ಹೆಸರು | : | ಅಬುಬಕ್ಕರ್ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ವಿದೇಶದಲ್ಲಿ ಕೆಲಸ |
| ವಾಸ್ತವ್ಯ | : | ಕೊಟೇಶ್ವರ ರಸ್ತೆ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ19/06/2024**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 01.09.2022 ರಂದು ನಮ್ಮ ಮನೆಯ ಕಂಪೌಂಡಿನಲ್ಲಿ ಇರುವ ಎಕ್ಟಿವಾ ವಾಹನವನ್ನು ರಾತ್ರಿ 10.00 ಗಂಟೆಯ ಸುಮಾರಿಗೆ ಕದ್ದುಕೊಂಡು ಹೋಗಿದ್ದರು. ಮರ ದಿನ ನನಗೆ ಬೆಳಿಗ್ಗೆ 6.00 ಗಂಟೆಯ ಸಮಯಕ್ಕೆ ಕಳ್ಳತನವಾದ ವಿಷಯ ಗೊತ್ತಾಗಿರುತ್ತದೆ. ಎಕ್ಟಿವಾ ವಾಹನ ಬಿಳಿಯ ಬಣ್ಣದ್ದಾಗಿತ್ತು. ನಂತರ ದಿಃ 14.09.2022 ರಂದು ನಾನು ಪಿರ್ಯಾದಿಯನ್ನು ನೀಡಿರುತ್ತೇನೆ. ದಿಃ 15.09.2022 ರಂದು ಪಂಚನಾಮೆಯನ್ನು ಆರೋಪಿ ಮತ್ತು ಪೊಲೀಸರು ಹಾಜರಿದ್ದು ಪಂಚನಾಮೆಯನ್ನು ಮಾಡಿರುತ್ತಾರೆ. ದಿಃ 19.09.2022 ರಂದು ಅಕ್ಟಿವಾ ವಾಹನ ಆರೋಪಿ ಮನೆಯಲ್ಲಿ ಸಿಕ್ಕಿರುತ್ತದೆ ಆಗ ಪೊಟೋಗಳನ್ನು ತೆಗೆದಿರುತ್ತಾರೆ ಮತ್ತು ನನ್ನ ಸಹಿ ಪಡೆದಿರುತ್ತಾರೆ. ನಾನು ಆರೋಪಿಯನ್ನು ನೋಡಿಲ್ಲ. ಸಾಕ್ಷಿಯು ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 2 ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 ಎ ಮತ್ತು 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 2 ಪೊಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 01.09.2022 ರಂದು ನಮ್ಮ ಮನೆಯ ಕಂಪೌಂಡಿನಲ್ಲಿಟ್ಟ ಕೆಎ –47 - ಆರ್ –9027 ಎಕ್ಟಿವಾ ವಾಹನವು ಕಳ್ಳತನವಾಗಿದೆ ಎಂದರೆ ಸರಿ. ವಾಹನವನ್ನು ಹುಡುಕಾಡಿ ತಡವಾಗಿ ಪಿರ್ಯಾದಿಯನ್ನು ದಿಃ 14.10.2022 ರಂದು ನೀಡಿರುತ್ತೇವೆ. ಚಾಸಾ –2 ಮತ್ತು 3 ರವರು ಪಂಚನಾಮೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಚಾಸಾ –5 ಮತ್ತು 6 ರವರು ಪಂಚನಾಮೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. 2 ಪಂಚನಾಮೆಗಳನ್ನು ಪೊಲೀಸರು ನನಗೆ ಓದಿ ಹೇಳಿದ್ದರು. ಅದನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**